## 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

**MVC. No.977/2025**

ಪಿ.ಡಬ್ಲ್ಯೂ . **2**

ದಿನಾಂಕ:**10.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.19 | Recent OPD slip |
| ನಿ.ಪಿ.20 | New and Old X rays |
| ನಿ.ಪಿ.21 | Case sheet |

**ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದ**

ನಾನು ಪಾವಗಡ ಆಸ್ಪತ್ರೆಯಲ್ಲಿ ದಿ.14.05.2022 ರಿಂದ ಇಲ್ಲಿಯವರೆಗೆ senior Specialist Orthopedic surgeon ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ತುಮಕೂರು ಜಿಲ್ಲಾ

ಆಸ್ಪತ್ರೆರವರು ಕೊಟ್ಟಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಅರ್ಜಿದಾರರಿಗೆ both bones fracture ಆಗಿರುತ್ತದೆ ಎಂದು ಹೇಳಿದ್ದು ಆ ಬಗ್ಗೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿದೆಯೇ ಎಂದರೆ ಸಾಕ್ಷಿಯು left leg middle third shaft ಎಂದು ನಮೂದಿದೆ ಅನ್ನುತ್ತಾರೆ. ನಿ.ಪಿ.13 ರಲ್ಲಿ history of old fracture to same leg ಎಂದು ನಮೂದಿದೆ ಎಂದರೆ ಸರಿ. ನಿ.ಪಿ.13 ಡಿಸ್ ಚಾರ್ಜ್ ಸಮ್ಮರಿಯಲ್ಲಿ ನಮೂದಿಸಿರುವ ಗಾಯಗಳು ದಿ.18.06.2025 ರಂದು ಆದಂತಹ ಗಾಯಗಳಿಗೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ.13 ರಲ್ಲಿ ನಮೂದಿಸಿರುವ old fracture, ದಿ.18.06.2025 ರ ಪೂರ್ವದಲ್ಲಿ ಆಗಿರುವಂತಹ ಯಾವುದೋ ಅಪಘಾತದ ಗಾಯಗಳು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ನಿ.ಪಿ.13 ರಲ್ಲಿ old fracture ಗಾಾಯಗಳನ್ನು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಯಾವ ದಿನಾಂಕ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರಿಗೆ ನಾನು ಏನು ಚಿಕಿತ್ಸೆ ಕೊಟ್ಟಿರುತ್ತೇನೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ದಾಖಲೆಗಳು ಅರ್ಜಿದಾರರ ಬಳಿಯೇ ಇರುತ್ತದೆ ಅನ್ನುತ್ತಾರೆ ಸಾಕ್ಷಿ ಮುಂದುವರಿದು ಒಂದು ಒಪಿಡಿ ಸ್ಲಿಪ್ ನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಅನ್ನುತ್ತಾರೆ. ಅರ್ಜಿದಾರರಿಗೆ ಯಾವುದೇ ನ್ಯೂನ್ಯತೆ ಇಲ್ಲದಿದ್ದರೂ ಅವರಿಗೆ ಸಹಾಯ ಮಾಡಲು ನ್ಯೂನತೆ ಇರುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ಅರ್ಜಿದಾರರನ್ನು ಸರ್ವೋದಯ ಆಸ್ಪತ್ರೆಯಲ್ಲಿ ಇತ್ತೀಚೆಗೆ ಪರೀಕ್ಷಿಸಿರುತ್ತೇನೆ. ಅರ್ಜಿದಾರರನ್ನು ಇತ್ತೀಚೆಗೆ ದಿ.31.07.2026 ರಂದು ಪರೀಕ್ಷಿಸಿರುತ್ತೇನೆ. ನಿ.ಪಿ.19 ಒಪಿಡಿ ಸ್ಲಿಪ್ ನಲ್ಲಿ ನಾನು ಅರ್ಜಿದಾರರನ್ನು ಪರೀಕ್ಷಿಸಿರುವ ದಿನಾಂಕ ದಿ.03.08.2026 ಎಂದು ನಮೂದಿದೆ ಎಂದರೆ ಸರಿ. ದಿನಾಂಕ 31.07.2026 ಮತ್ತು 03.08.2026 ರಂದು ನಾನು ಅರ್ಜಿದಾರರನ್ನು ಯಾವುದೇ ಪರೀಕ್ಷೆಗೆ ಒಳಪಡಿಸದೇ ಇದ್ದರೂ ನಮ್ಮ ಕ್ಲಿನಿಕ್ ನಲ್ಲಿಯೇ ಈ ದಾಖಲೆಗಳನ್ನು ಸೃಷ್ಟಿಸಿ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಎಕ್ಸರೇಗಳು ಸಹಾ ಅರ್ಜಿದಾರರಿಗೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ fracture ಬಗ್ಗೆ ನಮೂದು ಮಾಡದೇ ಇದ್ದ ಕಾರಣ ಅರ್ಜಿದಾರರಿಗೆ ನಾನು ಹೇಳಿರುವಂತಹ ಅಂಗನ್ಯೂನ್ಯತೆ ಬರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು